**ವಿದ್ಯಾರ್ಥಿ:** ಸರ್ ಇಲ್ಲಿ ನೋಡಿ ನನ್ನ ತಲೆಯ ಮೇಲೆ ಒಂದು ಇರುವೆ ಹತ್ತುತ್ತಿದೆ.
**ಗುರುಗಳು:** ಹೇ... ತಲೆಹರಟೆ, ಅದನ್ನು ನನಗೆ ಯಾಕೆ ಹೇಳ್ತಾ ಇದೀಯಾ?
**ವಿದ್ಯಾರ್ಥಿ:** ನನ್ನ ತಲೆಗೆ ಏನೂ ಹತ್ತುವುದಿಲ್ಲವೆಂದು ನೀವು ಯಾವಾಗಲೂ ಹೇಳ್ತಾ ಇರ್ತೀರಲ್ಲ. ಅದಕ್ಕೆ!

***

**ವಧುವಿನ ತಂದೆ:** ಏನಪ್ಪಾ ಎಣ್ಣೆ ಹೊಡೆಯೋ ಅಭ್ಯಾಸ ಏನಾದ್ರೂ ಇದೆಯಾ?
**ಹುಡುಗ (ನಾಚಿಕೆಯಿಂದ):** ಸರ್ ಮೊದಲು ಹುಡುಗಿ ನೋಡುವ ಕಾರ್ಯಕ್ರಮ ಮುಗೀಲಿ. ಆಮೇಲೆ ಕುಳಿತುಕೊಂಡರಾಯಿತು!

***

**ಮನೆಯೊಡತಿ:** ಸರ್ ಮನೆಯೊಳಗೆ ಬನ್ನಿ. ನಮ್ಮ ಹೊಸ ನಾಯಿಯ ಬಗ್ಗೆ ಚಿಂತಿಸದಿರಿ.
**ಆಗಂತುಕ:** ಅಂದರೆ ಅದು ಕಚ್ಚೋಲ್ಲ ಅಂತಾಯಿತು.
**ಮನೆಯೊಡತಿ:** ಅದನ್ನೇ ನಾವೀಗ ಪರೀಕ್ಷಿಸಬೇಕಾಗಿದೆ.

***

**ಪಕ್ಕದ ಮನೆಯ ಹುಡುಗ:** ಆಂಟಿ... ಅಂಕಲ್ ಮನೆಯೊಳಗೆ ಇದಾರಾ?
**ಆಂಟಿ:** ಇಲ್ಲ ಕಣೋ... ಹೊರಗೆ ಹೋಗಿದಾರೆ. ಯಾಕೆ?
**ಪಕ್ಕದ ಮನೆಯ ಹುಡುಗ:** ಏನಿಲ್ಲ ನನ್ನ ಅಮ್ಮ ಅಂಕಲ್‌ಗೆ 'ಫಾದರ್ಸ್ ಡೇ' ವಿಶ್ ಮಾಡಿ ಬಾ ಅಂತ ಹೇಳಿದ್ರು!

***

**ಹೆಂಡತಿ:** (ಚಿತ್ರಮಂದಿರದಲ್ಲಿ) ರೀ... ಹಿಂದಿನಿಂದ ಯಾರೋ ನನ್ನ ಕಾಲನ್ನು ಮುಟ್ಟುತ್ತಿದ್ದಾರೆ.
**ಗುಂಡ:** ಅಷ್ಟೇ ತಾನೇ? ಒಂದೇ ಒಂದು ಸಲ ನಿನ್ನ ಮುಖವನ್ನು ಹಿಂದಕ್ಕೆ ತಿರುಗಿಸಿ ಅವರ ಕಡೆ ನೋಡು. ಆಗ ಮುಟ್ಟೋದನ್ನ ನಿಲ್ಲಿಸಿ ಬಿಡ್ತಾರೆ.

***

**ಹುಡುಗಿ:** ಈಗ ನಾವು ಎಲ್ಲಿಗೆ ಹೋಗ್ತಾ ಇದೀವಿ?
**ಗುಂಡ:** ಹಾಗೇ ಲಾಂಗ್ ಡ್ರೈವ್.
**ಹುಡುಗಿ:** ಅರೆ... ಮೊದಲೇ ನನಗೆ ಯಾಕೆ ಹೇಳಲಿಲ್ಲ?
**ಗುಂಡ:** ನನಗೂ ಈಗಲೇ ಗೊತ್ತಾಗಿದ್ದು.
**ಹುಡುಗಿ:** ಹೌದಾ... ಹೇಗೆ?
**ಗುಂಡ:** ಕಾರಿನ ಬ್ರೇಕ್ ಫೈಲ್ ಆಗಿದೆ!

***

**ಗುಂಡ:** ಪ್ರಿಯೆ ನಾವಿಬ್ಬರೂ ಉಂಗುರ ಬದಲಾಯಿಸಿಕೊಳ್ಳೋಣವೇ?
**ಪ್ರೇಯಸಿ:** ಬೇಡ.
**ಗುಂಡ:** ಅಯ್ಯೋ ಯಾಕೆ.
**ಪ್ರೇಯಸಿ:** ನಿನ್ನ ಉಂಗುರ ಎರಡು ಗ್ರಾಂ ಇದೆ. ಆದರೆ ನನ್ನ ಉಂಗುರ ನಾಲ್ಕು ಗ್ರಾಂ ಇದೆ. ಅದಕ್ಕೆ!

***

ಸೈಕಲ್ ಕಲಿಯುತ್ತಿದ್ದ ಗುಂಡ ಎದುರಿಗೆ ಬರುತ್ತಿದ್ದ ಹುಡುಗಿಗೆ ಸೈಕಲ್ ಡಿಕ್ಕಿ ಹೊಡೆಸಿದ.
**ಹುಡುಗಿ:** ಹೇ... ತರಲೆ, ಬೆಲ್ ಬಾರಿಸಲಿಕ್ಕೆ ಆಗಲಿಲ್ಲವಾ?
**ಗುಂಡ:** ಅರೆ ಅದೊಂದನ್ನೇ ಪ್ರತ್ಯೇಕವಾಗಿ ಬಾರಿಸೋದೇನು? ಇಡೀ ಸೈಕಲ್ಲನ್ನೇ ಬಾರಿಸಿದ್ದೀನಿ"

***

**ಜಮೀನುದಾರ:** ಇವತ್ತು ಬೆಳಿಗ್ಗೆ ನನ್ನ ಕಾರಲ್ಲಿ ಹೊರಟು ಸಂಜೆಯಾದರೂ ನನ್ನ ಜಮೀನನ್ನು ಪೂರ್ತಿಯಾಗಿ ನೋಡಲು ಸಾಧ್ಯವಾಗಲಿಲ್ಲ.
**ಗುಂಡ:** ಹೌದಾ? ನಿಮ್ಮ ಬಳಿ ಇರುವಂತಹದ್ದೇ ಡಕೋಟಾ ಕಾರು ನಮ್ಮ ಮನೆಯಲ್ಲೂ ಇದೆ!

***

**ಪ್ರೇಯಸಿ:** ಡಾರ್ಲಿಂಗ್ ನಮ್ಮ ಮದುವೆ ಒಂದಲ್ಲಾ ಒಂದು ದಿನ ಆಗುತ್ತದೆ ಅಲ್ಲವೇ?
**ಗುಂಡ:** ಅರೆ... ಒಂದು ದಿನ ಯಾಕೆ? ಎರಡು ದಿನ ಆಗುತ್ತೆ. ನನ್ನ ಮದುವೆ ಒಂದು ದಿನ, ನಿನ್ನ ಮದುವೆ ಒಂದು ದಿನ!

***

**ಗುಂಡ:** ಹೋದ ತಿಂಗಳು ನೀನು ನನಗೆ ನೂರು ರೂಪಾಯಿ ಸಾಲ ಕೊಟ್ಟಿದ್ದೆ. ತಗೊ ಅದನ್ನು ವಾಪಸ್ ಕೊಡುತ್ತಿದ್ದೇನೆ.
**ಗೆಳೆಯ:** ಅರೆ ಹೌದಾ? ನಾನು ಮರೆತುಬಿಟ್ಟಿದ್ದೆ.
**ಗುಂಡ:** ಅಯ್ಯೋ ಮೂರ್ಖ! ಇದನ್ನು ಮೊದಲೇ ಹೇಳಬಾರದಿತ್ತೆ!

***

**ಗುಂಡ:** ಲೇ... ನಿನ್ನೆ ರಾತ್ರಿ ಒಂದು ಕೆಟ್ಟ ಕನಸು ಬಿತ್ತು. ಆ ಕನಸಿನಲ್ಲಿ ನಾನು ವಿಧುರನಾದಂತೆ ಕಂಡೆ.
**ಹೆಂಡತಿ:** ಅಯ್ಯೋ ದೇವರೇ ನಿಮ್ಮನ್ನು ಆ ಭಗವಂತ ವಿಧುರನನ್ನಾಗಿ ಮಾಡದಿರಲಿ. ನಾನು ವಿಧವೆಯಾದರೂ ಪರವಾಗಿಲ್ಲ!

ಸಂಗ್ರಹ: ಎಂ.ಕೆ. ಮಂಜುನಾಥ್,
ಬೆಂಗಳೂರು

ಮೆದುಳು ಸಂಶೋಧನಾ ಕೇಂದ್ರ ಉದ್ಘಾಟನೆ



ಹಿಂಸೆಯನ್ನೇ ದಿನಚರಿ ಮಾಡುವವರ ಬುದ್ಧಿ ಪತ್ತೆ ಮಾಡಲು ಅಗತ್ಯ ಬೇಕು!




ಆ ಕಾಲವೇ ಚೆನ್ನಾಗಿತ್ತು! ಮನೆಯೊಳಗೆ ಇದ್ದಿದ್ರೆ ರೈಲು, ಬಸ್ಸು ಸುಡುವ ಪ್ರಮೇಯವೇ ಬರ್ತಿರಲಿಲ್ಲ!




ಶ್ರೀ ಆದಿಶಕ್ತಿ ಜ್ಯೋತಿಷ್ಯ ಪೀಠಂ
Your all problems 100% solutions
ಪ್ರಧಾನ ತಾಂತ್ರಿಕ್ ಶ್ರೀ ರಾಘವೇಂದ್ರ ಶರ್ಮ ಗುರೂಜಿ
ತಮ್ಮ ಅತ್ಯನ್ನತ ಜ್ಯೋತಿಷ್ಯ ಜ್ಞಾನದಿಂದ ಸಕಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡುತ್ತಾರೆ.
ದೈವಪ್ರಶ್ನೆ, ಅಷ್ಟಮಂಗಲ ಪ್ರಶ್ನೆ, ಅಂಜನಪ್ರಶ್ನೆ ನೋಡಿ ಸಂಪೂರ್ಣ ಭವಿಷ್ಯ ತಿಳಿಸುತ್ತಾರೆ.
ಧನವಶ, ಜನವಶ, ಭೂಮಿವಶ, ಶತ್ರುನಾಶ, ಕೋರ್ಟ್-ಕೇಸ್, ಪ್ರೀತಿಯಲ್ಲಿ ನಂಬಿಮೋಸ, ಇಷ್ಟಪಟ್ಟವರು ನಿಮ್ಮಂತೆ ಆಗಲು, ಸ್ತ್ರೀ-ಪುರುಷ ವಶೀಕರಣ, ಇನ್ನು ಸಮಸ್ಯೆ ಏನೇ ಇದ್ದರು ಕೇರಳದ ಕೊಳ್ಳೇಗಾಲದ ಅಥರ್ವಣ ಬ್ರಹ್ಮ ತಂತ್ರದಲ್ಲಿ ವಿದ್ಯೆಯಿಂದ ಕೇವಲ 2 ದಿನದಲ್ಲಿ 100% ಪರಿಹಾರ ಶತಃಸಿದ್ಧ,
ನಮಗಿಂತ ಮೊದಲು ಬೇರೆಯಾರೆ ಪರಿಹಾರ ಮಾಡಿ ಕೊಟ್ಟಲ್ಲಿ ಸೂಕ್ತ ಬಹುಮಾನ ನೀಡಲಾಗುತ್ತದೆ.
ವಿ.ಸೂ: ಸ್ತ್ರೀಯರಿಗೆ ಫೋನಿನ ಮೂಲಕ ನೇರ ಪರಿಹಾರ ನೀಡುತ್ತಾರೆ
ವಿಳಾಸ: ಶ್ರೀ ಬಂಡೇ ಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವಿಪುರಂ ಗುಟ್ಟಹಳ್ಳಿ, ಬೆಂಗಳೂರು
9620201188